ಕರ್ನಾಟಕ ಸರಕಾರ

ಉಪನಿರ್ದೇಶಕರ ಕಾರ್ಯಾಲಯ, ಪದವಿ ಪೂರ್ವ ಶಿಕ್ಷಣ ಇಲಾಖೆ.

# ದ್ವಿತೀಯ ಪಿ.ಯು.ಸಿ ಪೂರ್ವಸಿದ್ಧತಾ ಪರೀಕ್ಷೆ-2023

ಸಮಯ : 3 ಗಂಟೆ 15 ನಿಮಿಷಗಳು | ವಿಷಯ : ಕನ್ನಡ (01) | ಅಂಕಗಳು : 100

## ಅ - ಬಹು ಆಯ್ಕೆ ವಿಭಾಗ

I. ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ. 10×1=10

1) ಮಯತನುಜೆ ಎಂದರೆ ಯಾರು ?
ಅ) ಮಂಡೋದರಿ ಆ) ಸೀತೆ ಇ) ರಾವಣ ಈ) ರಾಮ

2) ಬಸವಣ್ಣನವರ ವಚನಾಂಕಿತ ಯಾವುದು ?
ಅ) ಗುಹೇಶ್ವರ ಆ) ಚೆನ್ನಮಲ್ಲಿಕಾರ್ಜುನ ಇ) ಕೂಡಲಸಂಗಮದೇವ ಈ) ರಾಮನಾಥ

3) ಅರಣ್ಯವಾಸದಲ್ಲಿದ್ದಾಗ ದ್ರೌಪದಿಯನ್ನು ಎಳೆದೊಯ್ದವರಾರು ?
ಅ) ಕೀಚಕ ಆ) ಸೈಂಧವ ಇ) ಭೀಮ ಈ) ರಾವಣ

4) ಹತ್ತಿಯ ಬೀಜಕ್ಕೆ ಯಾವುದು ತಪ್ಪದ ಕರ್ಮ ?
ಅ) ನೀರಾಗುವ ಆ) ಬೆಣ್ಣೆಯಾಗುವ ಇ) ಬತ್ತಿಯಾಗುವ ಈ) ಗಿಡವಾಗುವ

5) ವಾಲಪರ್ಯೆನ ದುರಂತದ ಮೂಲಬೀಜಗಳು ಯಾವ ರೂಪದಲ್ಲಿ ಬಂದವು ?
ಅ) ಹೂಗಿಡಗಳ ಆ) ಚಹಾಗಿಡಗಳ ಇ) ಹಣ್ಣುಗಳ ಈ) ಮರಗಿಡಗಳ

6) ನಮ್ಮ ದೇಶದಲ್ಲಿ ಖಿಲವಾಗಿ ಹೋದ ಧರ್ಮ ಯಾವುದು ?
ಅ) ಹಿಂದೂ ಆ) ಮುಸ್ಲಿಂ ಇ) ಬೌದ್ಧ ಈ) ಜೈನ

7) ಕಲಾಂ ಅವರು ಯಾವ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರೊಫೆಸರ್ ಆಗಿದ್ದರು ?
ಅ) ಅಣ್ಣಾಮಲೈ ಆ) ಕಾಮರಾಜ ಇ) ಬನಾರಸ ಈ) ಬೆಂಗಳೂರು

8) ದುರ್ಗಪ್ಪ ಏನನ್ನು ಕೇಳಿಪಡೆಯಲು ಬಂದಿದ್ದನು ?
ಅ) ರೂಪಾಯಿ ಆ) ಕೊಡಲಿ ಇ) ಸುತ್ತಿಗೆ ಈ) ಕಾಫಿಬೀಜ

9) ರಹಮಾನ್ ''ಐವಿಟ್‌ನೆಸ್'' ಎಂದು ಯಾರನ್ನು ತೋರಿಸಿದನು ?
ಅ) ಫಾತಿಮಾ ಆ) ಜುಬೇದಾ ಇ) ದುರ್ಗಪ್ಪ ಈ) ವೇಲಾಯುದ್ಧ

10) ನಾಗರಾಜ ಕೋವಿ ಹಿಡಿದು ಎಲ್ಲಿ ಕುಳಿತಿದ್ದ ?
ಅ) ಕಣಿವೆಯಲ್ಲಿ ಆ) ಹಳ್ಳದಲ್ಲಿ ಇ) ಗಿಡದಲ್ಲಿ ಈ) ಶಿಕಾರಿಗಂಡಿಯಲ್ಲಿ

ಆ) ಹೊಂದಿಸಿ ಬರೆಯಿರಿ. 5X1=5

| 11) | | |
|---|---|---|
| | ಅ) ಹರಹರಾ ಶ್ರೀ ಚೆನ್ನಸೋಮೇಶ್ವರ | 1) ಹಬ್ಬಲಿ ಅವರ ರಸಬಳ್ಳಿ |
| | ಆ) ಜಾಲಿಯ ಮರದಂತೆ | 2) ಒಮ್ಮೆ ನಗುತ್ತೇವೆ |
| | ಇ) ಜನಪದ ಗೀತೆಗಳು | 3) ಬೆಳಗುಜಾವ |
| | ಈ) ಅಂಬಿಕಾತನಯದತ್ತ | 4) ಪುಲಗೆರೆ ಸೋಮನಾಥ |
| | ಉ) ನಾನೆಂಬ ಮಾಯೆ | 5) ಮುಂಬೈ ಜಾತಕ |
| | | 6) ದುರ್ಜನರು |

ಇ) ಬಿಟ್ಟ ಸ್ಥಳಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. 5X1=5
(ಶ್ರೀರಾಮಚಂದ್ರ, ನಿಶಾಶರ್ಮ, ವೃದ್ಧರಿಗೆ, ರುದ್ರಪ್ಪ, ಬೆಳ್ಳಿಲೋಟ)

12) ಕ) ಬಸಲಿಂಗ ವೈದ್ಯರಿಗಾಗಿ ಅಲೆದಾಗ ಜೊತೆಗಿದ್ದ ರಾಜಕಾರಣಿ.......................
ಖ) ದುರಾಸೆಯ ಹುಡುಗನನ್ನು ನಿರಾಕರಿಸಿದ್ದವರು..............................
ಗ) ಧಣಿಗಳ ದಾಂಪತ್ಯಕ್ಕೆ.......................... ಮೂಕ ಸಾಕ್ಷಿಯಾಗಿತ್ತು.
ಘ) ವಸುಧೆಗೆ ಒಡೆಯನೆನಿಸಿದವನು.......................
ನ) ಬಾಯಿಚಪಲ...................... ಜಾಸ್ತಿಇರುತ್ತದೆ.

## 'ಆ' ವಿಭಾಗ

II. ಅ) ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. 4×2=8

13) ಘೋರತರ ವಿಷ ಕುಡಿಯುವುದಾಗಿ ದ್ರೌಪದಿ ಏಕೆ ಹೇಳುತ್ತಾಳೆ ?
14) ಯಾರಿಗೆ ತತ್ವಜ್ಞಾನ ಹೇಳಿ ಪ್ರಯೋಜನವಿಲ್ಲ?
15) ಮಗು ಹುಟ್ಟಿ ಬೆಳೆದದ್ದು ಎಲ್ಲಿ ?
16) ಮುದುಕಿಯು ಯಾರನ್ನು ಏನೆಂದು ಪ್ರಾರ್ಥಿಸುವಳು ?
17) ದನಗಳಿಗೆ ಜನಗಳಿಗೆ ಏನೇನು ಇಲ್ಲ ?

ಆ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. 3×2=6

18) ಕೊನೆಯಲ್ಲಿ ಬಸಲಿಂಗನಿಗೆ ಏನೆಂದು ನಿಶ್ಚಿತವಾಗತೊಡಗಿತ್ತು ?
19) ಸಿಂಹಬಾಲದ ಕೋತಿಗಳಿಗೆ ಒದಗಿದ ತೊಂದರೆ ಏನು ?
20) ಮನೋರಮೆ ಮುದ್ದಣ್ಣನನ್ನು ಹೇಗೆ ಉಪಚರಿಸಿದಳು ?
21) ವೀರೇಂದ್ರ ಸಿಂಪಿ ಹೇಳುವಂತೆ ಭಾವೈಕ್ಯತೆ ಈ ದೇಶದಲ್ಲಿ ಎಲ್ಲಿದೆ ? ಅದು ಹೇಗೆ ?

(ಪ್ರ.ತಿ.ನೋ)

ಇ) ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. 4×2=8

22) ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆ ಹೇಗೆ ?

23) ಸೊರಗಿದ್ದ ಆನೆಯನ್ನು ಕೃಷ್ಣೇಗೌಡ ಹೇಗೆ ಸಾಕಿದ ?

24) ಫಾರಸ್ಟ್ ಡಿಪಾರ್ಟ್‌ಮೆಂಟಿನವರ ನಂಬರ್ ಒನ್ ಎನಿಮಿಗಳು ಯಾರು ?

25) ಹುಚ್ಚುನಾಯಿಗಳು ಆಸ್ಪತ್ರೆಯಲ್ಲಿ ಹೇಗೆ ವರ್ತಿಸುತ್ತವೆಂದು ಪುಟ್ಟಯ್ಯ ಹೇಳಿದನು ?

26) ಆನೆಯನ್ನು ಹದ್ದು ಬಸ್ತಿನಲ್ಲಿಡುವುದರ ಬಗ್ಗೆ ವೇಲಾಯುಧನ ಅಪ್ಪ ಏನು ತಿಳಿಸಿದ್ದ ?

## 'ಇ' ವಿಭಾಗ

III. (ಅ) ಯಾವುದಾದರೂ ಎರಡು ವಾಕ್ಯಗಳ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. 2×3=6

27) ರಣಾಗ್ರದೊಳ್ ಪಿಡಿದು ತಂದಾಂ ಕೊಟ್ಟಪೆಂ.

28) ಕಲಿಭೀಮನೇ ಮಿಡುಕುಳ್ಳ ಗಂಡನು.

29) ಮುಳುಗಿರಲಿ ಮುಪ್ಪು ಚಿಂತನದಿ.

(ಆ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. 1×3=3

30) ನಮ್ಮ ಭಾಷೆಯಲ್ಲಿ ಓದಿದ್ದ ಮೈಗೆ ಹತ್ತುವುದು.

31) ಮಗುವೇ ಮೊದಲ ವಿಜ್ಞಾನಿ.

(ಇ) ಯಾವುದಾದರೂ ಒಂದು ವಾಕ್ಯದ ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. 1×3=3

32) ಕುಶಾಲಿಗಿಂತ ಸೊಂಡಿಲು ಬೀಸಿದರೆ ಸಾಕಲ್ಲ.

33) ಕೋವಿ ಸಿಕ್ಕಿದೆ ಆದರೆ ಹೆಣ ಸಿಗಲಿಲ್ಲ.

## 'ಈ' ವಿಭಾಗ

IV. (ಅ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. 2×4=8

34) ಮಂಗಳಲಿಂಗದ ಮಹತ್ವವನ್ನು ಹೇಗೆ ವಿವರಿಸಲಾಗಿದೆ ?

35) ದ್ರೌಪದಿ ಅವಮಾನಕ್ಕೊಳಗಾದ ಮೂರು ಪ್ರಸಂಗಗಳನ್ನು ವಿವರಿಸಿ.

36) ವೀರ, ಮಂತ್ರಿ, ರಾಜ ಮತ್ತು ಯೋಗಿಗಳಿಗೆ ಇರಬೇಕಾದ ಅರ್ಹತೆಗಳೇನು ?

37) ಗರತಿ ತವರಿಗೆ ಏನೆಂದು ಹರಸುತ್ತಾಳೆ ?

(ಆ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. 1×4=4

38) ಬಸಲಿಂಗನು ಎದುರಿಸುತ್ತಿದ್ದ ಸಮಸ್ಯೆಗಳು ಯಾವುವು ?

39) ಲೇಖಕಿಯ ಪತಿಯ ಮೂತ್ರಪಿಂಡದ ಕಲ್ಲು ಕರಗಿ ಹೋಗಿದ್ದು ಹೇಗೆ ?

40) ಧಣಿ ಮತ್ತು ಹೊಳೆಯ ನಡುವಿನ ಸಮರವನ್ನು ಚಿತ್ರಿಸಿ.

(ಇ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. 1×4=4

41) ಆನೆ ಮತ್ತು ಮಾವುತ ವೇಲಾಯುಧನನ್ನು ಸಾಗಹಾಕಲು ಮಠದವರು ಹವಣಿಸಿದ್ದೇಕೆ ?

42) ದುರ್ಗಪ್ಪನಿಗೆ [illegible]ಮನ್ ಕೆಲಸ ರೋಸಿ ಹೋಗಲು ಕಾರಣಗಳೇನು ?

43) ನಾಗರಾಜನ ನಿಗೂಢ ಸಾವಿನ ಬಗ್ಗೆ ಜನರ ಅಭಿಪ್ರಾಯವೇನು ?

## 'ಉ' ವಿಭಾಗ

V. (ಅ) ಯಾವುದಾದರೂ ಒಂದು ಪದ್ಯದ ಭಾವಾರ್ಥ ಬರೆಯಿರಿ. 1×5=5

44) ಕರುಣೆಸುಮೊಡೆನಗೆ ದಶಕಂ
ಧರ ಧುರದೊಳ್ ರಘುತನೂಜನಾಯಃ ಪ್ರಾಣಂ
ಬರೆಗಂ ಬಾರದಿರೆನುತಂ
ಧರಿತ್ರಿಯೊಳ್ ಮೈಯನೊಕ್ಕು ಮೂರ್ಛೆಗೆ ಸಂದಳ್.

ಅಥವಾ

ಕ್ರಿಸ್ಮಸ್ ಹೊತ್ತು ತಂದಿದೆ ಈ ಮನೆಗೆ
ಕೇಕು ಚಳಿ ನಕ್ಷತ್ರ ದೀಪ
ಪ್ಲಾಸ್ಟಿಕ್ ನಕಲಿನ ಕುಬ್ಜತೆಗೆ
ಕರುಣೆಸಿದೆ ಗಿಡದ ರೂಪ
ಅದಕ್ಕೆ ಮಂಜಿನ ಕೆಲಸ ಮಾಡಿದೆ ಹತ್ತಿ
ಸ್ಕರ್ಟಿನ ಹುಡುಗಿಯ ಮೊಣಕಾಲಲ್ಲಿ
ಬೆಚ್ಚಗಾಗಿದೆ ಮೋಂಬತ್ತಿ

## ಭಾಷಾಭ್ಯಾಸ

VI. (ಅ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಆರಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ. 6×2=12

45) ಕೆಳಗಿನ ಎರಡು ಪದಗಳಿಗೆ ನಾನಾರ್ಥಗಳನ್ನು ಬರೆಯಿರಿ.

46) ಕೆಳಗಿನ ಎರಡು ಪದಗಳಿಗೆ ತದ್ಭವರೂಪ ಬರೆಯಿರಿ.

47) ಕೆಳಗಿನ ಎರಡು ನುಡಿಗಟ್ಟುಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಬರೆಯಿರಿ.

48) ಕೆಳಗಿನ ಎರಡು ಪದಗಳಿಗೆ ಕಾಲಸೂಚಕಗಳನ್ನು ಬರೆಯಿರಿ.

49) ಕೆಳಗಿನ ಎರಡು ಪದಗಳಿಗೆ ಗುಣವಾಚಕಗಳನ್ನು ಬರೆಯಿರಿ.

50) ಕೆಳಗಿನ ಎರಡು ಪದಗಳ ವಿಭಕ್ತಿಯನ್ನು ಹೆಸರಿಸಿರಿ.

51) ಕೆಳಗಿನ ಎರಡು ಪದಗಳಿಗೆ ನಿಷೇಧಾರ್ಥಕ ರೂಪಗಳನ್ನು ಬರೆಯಿರಿ.

| | | |
|---|---|---|
| ದೊರೆ | ಬಟ್ಟೆ | ಮುನಿ |
| ಅಗ್ನಿ | ವೀರ | ಯೋಗಿ |
| ತಲೆಬಾಗು | ಹೊಟ್ಟೆಹೊರೆ | ಬೇರೂರು |
| ಬಂದನು | ಹೋಗುವನು | ತಿನ್ನುತ್ತಾರೆ |
| ಘೋರಪಾತಕಿ | ಅಪ್ರತಿಮಲ್ಲ | ಮರಿಗೂಗೆ |
| ಧರೆಯೊಳ್ | ಬಸಲಿಂಗನಿಗೆ | ವಿಶ್ವಾಸದಿಂದ |
| ಕೇಳುವರು | ಬರುವರು | ಹೋಗುವನು |

(ಆ) ಯಾವುದಾದರೂ ಒಂದನ್ನು ಕುರಿತು ಪ್ರಬಂಧ ಬರೆಯಿರಿ. 1×5=5

52) ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆ -ಅಥವಾ- ಜೈವಿಕ ಇಂಧನದ ಮಹತ್ವ

(ಇ) ಪತ್ರ ಲೇಖನ : ಯಾವುದಾದರೂ ಒಂದನ್ನು ಕುರಿತು ಪತ್ರ ಬರೆಯಿರಿ. 1×4=4

53) ಶೈಕ್ಷಣಿಕ ಸಾಲ ಸೌಲಭ್ಯ ಕೋರಿ ಬ್ಯಾಂಕಿನ ವ್ಯವಸ್ಥಾಪಕರಿಗೆ ಪತ್ರ ಬರೆಯಿರಿ.
-ಅಥವಾ- ಶೈಕ್ಷಣಿಕ ಪ್ರವಾಸಕ್ಕೆ ಅನುಮತಿ ಕೋರಿ ತಂದೆ/ತಾಯಿಗೆ ಪತ್ರ ಬರೆಯಿರಿ.

(ಈ) ಕೆಳಗಿನ ಗಾದೆಗಳಲ್ಲಿ ಒಂದನ್ನು ವಿಸ್ತರಿಸಿ ಬರೆಯಿರಿ. 1×4=4

54) ಹಣಕ್ಕಿಂತ ಗುಣಮುಖ್ಯ -ಅಥವಾ- ಬೆಳೆಯುವ ಸಿರಿ ಮೊಳಕೆಯಲ್ಲಿ

-oOo-